# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಮೈ.9350/2017/ಉನಿವಿ–2

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 18.8.2018.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** (1) ಶ್ರೀ ಸಿಪ್ರಿಯನ್ ಮಿರಾಂದ, ಕಾರ್ಯನಿರ್ವಹಣಾಧಿಕಾರಿ, ತಾಲ್ಲೂಕು ಪಂಚಾಯತ್, ಬಂಟ್ವಾಳ ಮತ್ತು (2) ಶ್ರೀಮತಿ ಪ್ರೇಮಲತ, ಪಿಡಿಒ, ಮನಚ ಗ್ರಾಮ ಪಂಚಾಯತಿ, ಬಂಟ್ವಾಳ ತಾಲ್ಲೂಕು, *ದಕ್ಷಿಣ ಕನ್ನಡ ಜಿಲ್ಲೆ,* ಇವರ ವಿರುದ್ಧ ಕ್ರಮಕೈಗೊಳ್ಳುವ ಬಗ್ಗೆ.

*******

ಶ್ರೀ. ಅಬ್ದುಲ್ ಅಜೀಜ್ ಕಟ್ಟಿದಡ್ಕ ಮನೆ, ಮನಚ ಗ್ರಾಮದ ನಿವಾಸಿ, ಬಂಟ್ವಾಳ ತಾಲ್ಲೂಕು, *ದಕ್ಷಿಣ ಕನ್ನಡ ಜಿಲ್ಲೆ,* (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ಸಿಪ್ರಿಯನ್ ಮಿರಾಂದ, ಕಾರ್ಯನಿರ್ವಹಣಾಧಿಕಾರಿ, ತಾಲ್ಲೂಕು ಪಂಚಾಯತ್, ಬಂಟ್ವಾಳ ಮತ್ತು (2) ಶ್ರೀಮತಿ ಪ್ರೇಮಲತ, ಪಿಡಿಒ, ಮನಚ ಗ್ರಾಮ ಪಂಚಾಯತಿ, ಬಂಟ್ವಾಳ ತಾಲ್ಲೂಕು, *ದಕ್ಷಿಣ ಕನ್ನಡ ಜಿಲ್ಲೆ,* (ಇನ್ನು ಮುಂದೆ ಕ್ರಮವಾಗಿ 1 ಮತ್ತು 2ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ ಬಂಟ್ವಾಳ ತಾ.ಮನಚ ಗ್ರಾಮದ ತಮ್ಮ ಪತ್ನಿ ಅಲ್ಪಸಂಖ್ಯಾತರ ಕೋಟಾದಲ್ಲಿ ವಸತಿಗೆ ಗ್ರಾಮ ಪಂಚಾಯತಿಗೆ ಅರ್ಜಿ ಸಲ್ಲಿಸಿದ್ದು, ಸ್ಥಳ ತನಿಖೆ ನಡೆಸಿದ ಎದುರುದಾರರು 722 ಚದರ ಅಡಿ ವಿಸ್ತೀರ್ಣದ ಜಾಗವನ್ನು ಮಂಜೂರು ಮಾಡಿರುತ್ತಾರೆ.

ಆದರೆ ಸಂಪೂರ್ಣ ಕಡತವನ್ನು ತಾಲ್ಲೂಕು ಪಂಚಾಯತಿಗೆ ಕಳುಹಿಸಿದ್ದರೂ, ಎದುರುದಾರರು ಲಂಚದ ಆಸೆಗೆ ಇದುವರೆಗೂ ದೂರುದಾರರಿಗೆ ಮನೆ ಮಂಜೂರು ಮಾಡಿರುವುದಿಲ್ಲವೆಂದು ಆಪಾದಿಸಿರುತ್ತಾರೆ.

3. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರಿನ ಆಪಾದನೆಗಳನ್ನು ಅಲ್ಲಗಳೆದು ದೂರುದಾರರ ಹೆಂಡತಿ ಸವದತ್ ಎನ್ನುವವರಿಗೆ 2010-11ನೇ ಸಾಲಿನ ಬಸವ ವಸತಿ ಯೋಜನೆಯಲ್ಲಿ ಮನೆ ಮಂಜೂರಾಗಿರುತ್ತದೆ. ಸದರಿ ಮನೆಗಳನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಗಧಿಪಡಿಸಿದ ಮಾನದಂಡಗಳಡಿ ನಿರ್ಮಿಸಿದಲ್ಲಿ ಮಾತ್ರ ಫಲಾನುಭವಿಗಳಿಗೆ ಹಂತಹಂತವಾಗಿ ಹಣ ಪಾವತಿಯಾಗುತ್ತದೆ. ಸದರಿ ವರ್ಷದಲ್ಲಿ ದೂರುದಾರರ ಪತ್ನಿ ಗರಿಷ್ಟ 400 ಚದರ ಅಡಿ ವಿಸ್ತೀರ್ಣದ ಮನೆಯನ್ನು ಒಟ್ಟು 75,000/-ವೆಚ್ಚವನ್ನು ಮೀರದಂತೆ ನಿರ್ಮಿಸಬೇಕಾಗಿತ್ತು. ಆದರೆ ದೂರುದಾರರ ಪತ್ನಿ ಮನೆಯನ್ನು 772 ಚದರ ಅಡಿ ನಿರ್ಮಿಸಿದ್ದು, ಇದರ ವಿಸ್ತೀರ್ಣ ವಸತಿ ನಿಗಮದಿಂದ ನಿಗಧಿಪಡಿಸಿದ ಮಿತಿಗಿಂತ ಅಧಿಕವಾಗಿರುವುದರಿಂದ ಸದರಿಯವರಿಗೆ ಹಣ ಪಾವತಿಯಾಗಿರುವುದಿಲ್ಲ. ನಂತರ ದೂರುದಾರರ ಪತ್ನಿಯ ಮನೆಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರು, ಪಂಚಾಯತ್ ರಾಜ್ ಉಪವಿಭಾಗ ಇವರಿಂದ ಅಳತೆ ಮಾಡಿದಾಗ ಸದರಿ ಮನೆ ನಿರ್ಮಾಣಗೊಂಡು ಅಪೂರ್ಣವಾಗಿರುವ ವಿಸ್ತೀರ್ಣ 944.22 ಚದರ ಅಡಿ ಹಾಗೂ ಅಂದಾಜು ಮೊತ್ತ 7.10 ಲಕ್ಷ ಆಗಿರುತ್ತದೆಂದು ತಿಳಿಸಿರುತ್ತಾರೆ. ಕಾರಣ ಪ್ರಸ್ತುತ ಸಾಲಿನಲ್ಲಿ ಸದರಿ ಯೋಜನೆಯಡಿ ರಾಜೀವ್ ಗಾಂದಿ ವಸತಿ ನಿಗಮವು ಗರಿಷ್ಟ ವಿಸ್ತೀರ್ಣವನ್ನು 700 ಚದರ ಅಡಿ ಹಾಗೂ ವೆಚ್ಚವು 5 ಲಕ್ಷ ಮೀರದಂತೆ ಮನೆ ನಿರ್ಮಿಸಲು ಮಿತಿಯನ್ನು ನಿಗಧಿಗೊಳಿಸಲಾಗಿದೆಯೆಂದು ತಿಳಿಸಿರುತ್ತಾರೆ. ಆದರೆ ದೂರುದಾರರ ಪತ್ನಿ ನಿರ್ಮಿಸಿದ ಮನೆ ಪ್ರಸ್ತುತ ಮಿತಿಯನ್ನು ಕೂಡ ಮೀರಿದೆಯೆಂದು ತಿಳಿಸಿರುತ್ತಾರೆ.

4. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ 1ನೇ ಎದುರುದಾರರ ಆಕ್ಷೇಪಣೆಯನ್ನು ಪುನರುಚ್ಚರಿಸಿರುತ್ತಾರೆ. 2ನೇ ಎದುರುದಾರರು ತಾನು ಮುಣಚ ಗ್ರಾಮ ಪಂಚಾಯತಿಯಲ್ಲಿ 2012-13ನೇ ಸಾಲಿನಲ್ಲಿ ಕರ್ತವ್ಯಕ್ಕೆ ಸೇರಿದ್ದಾಗಿ ತಿಳಿಸಿರುತ್ತಾರೆ. ದೂರುದಾರರ ಪತ್ನಿ ಮನೆ ಮಂಜೂರು

ಅರ್ಜಿ ಸಲ್ಲಿಸಿದಾಗ ತಾನು ಮಣಿಚ ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲವೆಂದೂ ತಿಳಿಸಿರುತ್ತಾರೆ.

5. ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ ರವರು ನೀಡಿದ ನಿಯಮದ ಪ್ರಕಾರ ವಸತಿ ಯೋಜನೆಯಡಿ ಮನೆಗಳ ನಿರ್ಮಾಣದ 4 ಹಂತಗಳ ಜಿಪಿಎಸ್ ಪ್ರಗತಿಯನ್ನು ಎದುರುದಾರರು ನೀಡಬೇಕಾಗುತ್ತದೆ. ಮತ್ತು ಸದರಿ ಹಂತದ ಪ್ರಕಾರ ಫಲಾನುಭವಿಗೆ ಸಹಾಯಧನವನ್ನು ನೀಡಲಾಗುತ್ತದೆಂದು ಇರುತ್ತದೆ. ಎದುರುದಾರರು ಪ್ರಸ್ತುತ ದೂರುದಾರರ ಪತ್ನಿಯ ಮನೆ ಪೂರ್ಣಗೊಂಡಿರುತ್ತದೆಂದು ತಿಳಿಸಿರುತ್ತಾರೆ. ಮನೆ ಪೂರ್ಣಗೊಂಡ ನಂತರ ಜಿಪಿಎಸ್ ಪ್ರಕಾರ ಮನೆ ವಿಸ್ತೀರ್ಣ 944.22 ಚದರ ಅಡಿ ಎಂದು ತಿಳಿಸಿರುತ್ತಾರೆ. ದೂರುದಾರರ ಪತ್ನಿ 944.22 ಚದರ ಅಡಿಯಲ್ಲಿ ಮನೆಯನ್ನು ಕಟ್ಟಿದ್ದರೆ ಪ್ರಥಮ ಹಂತದಲ್ಲಿಯೇ ಎದುರುದಾರರು ಜಿಪಿಎಸ್ ಛಾಯಾಚಿತ್ರವನ್ನು ತೆಗೆದು ಬಸವ ವಸತಿ ಯೋಜನೆ ಪ್ರಾಧಿಕಾರಕ್ಕೆ ತಿಳಿಸಿ ಮುಂದಿನ ಕಾಮಗಾರಿಯನ್ನು ನಿಲ್ಲಿಸಬೇಕಾಗಿತ್ತು. ಆದರೆ ಎದುರುದಾರರು ಆ ಸಮಯದಲ್ಲಿ ಫಲಾನುಭವಿಯ ಕಾಮಗಾರಿಯನ್ನು ನಿಲ್ಲಿಸಿರುವುದಿಲ್ಲ ಮತ್ತು ನಿಗಮದ ನಿಯಮದ ಪ್ರಕಾರ ಜಿಪಿಎಸ್ ಛಾಯಾಚಿತ್ರವನ್ನು ಸಂಬಂಧಪಟ್ಟ ಇಲಾಖೆಗೆ ನೀಡಿರುವುದಿಲ್ಲ. 2ನೇ ಎದುರುದಾರರು ತಾವು 2012-13ನೇ ಸಾಲಿನಲ್ಲಿ ಕರ್ತವ್ಯಕ್ಕೆ ಹಾಜರಾದ ನಂತರ ದೂರುದಾರರ ಪತ್ನಿ ನಿರ್ಮಿಸುತ್ತಿರುವ ಮನೆಯ ಬಗ್ಗೆ ಮೇಲಾಧಿಕಾರಿಗಳಿಗೆ ಜಿಪಿಎಸ್ ಚಿತ್ರಣವನ್ನು ನೀಡಿರುವುದಿಲ್ಲ. ಕಾರಣ 1 ಮತ್ತು 2ನೇ ಎದುರುದಾರರು ಕರ್ತವ್ಯಲೋಪವೆಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

6. ಆದ್ದರಿಂದ, 1 ಮತ್ತು 2ನೇ ಎದುರುದಾರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ 3(1) (i) ರಿಂದ (iii)ರನ್ವಯ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡು ಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು

1957ರ ನಿಯಮ 14-ಎ ರಡಿಯಲ್ಲಿ r/w Rule 214(2)(b) of KCSRs ಅಡಿಯಲ್ಲಿ 1ನೇ ಎದುರುದಾರರ ವಿರುದ್ದ ಅನುಮತಿ ನೀಡಿ, 1 ಮತ್ತು 2ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು **ಉಪಲೋಕಾಯುಕ್ತರಿಗೆ** ವಹಿಸಬೇಕೆಂದೂ ಕೋರಲಾಗಿದೆ.

7. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 2018
18/8/18
**(ನ್ಯಾಯಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**